

بسم اللهِ الرّحمٰن الرّحيم

# ತಾಯಿಫ್ ಯುದ್ಧದ ಘಟನೆಗಳು ಮತ್ತು ಯುದ್ಧ ಸಂಪತ್ತಿನ ವಿತರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19–09–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಖುತ್ಬಗಳಲ್ಲಿ ತಾಯಿಫ್ ಯುದ್ಧದ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಆ ಯುದ್ಧದ ಸಂದರ್ಭದಲ್ಲಿ, ಒಬ್ಬ ಸಹಾಬಿ ಅಲ್ಲಿಯ ಜನರೊಂದಿಗೆ ಮಾತುಕತೆ ನಡೆಸಲು ಹೋಗಿದ್ದರು. ತಾಯಿಫ್‌ನ ಜನರು ಅವರಿಗೆ ಯಾವುದೇ ಹಾನಿ ಮಾಡುವುದಿಲ್ಲ ಎಂದು ಭರವಸೆ ನೀಡಿದ್ದರು. ಆದರೆ, ಆ ಸಹಾಬಿ ಕೋಟೆಯ ಸಮೀಪ ಹೋದಾಗ, ಆ ಜನರು ತಮ್ಮ ವಾಗ್ದಾನವನ್ನು ಉಲ್ಲಂಘಿಸಿ ಅವರನ್ನು ಶಹೀದ್ ಮಾಡಿದರು. ಇದರ ಹೊರತಾಗಿಯೂ, ಹಝ್ರತ್ ಪೈಗಂಬರ್(ಸ) ಸಂಧಾನದ ಪ್ರಯತ್ನಗಳನ್ನು ಕೈಬಿಡಲಿಲ್ಲ. ಮಾತುಕತೆಯನ್ನು ಮುಂದುವರೆಸಲು ಹಝ್ರತ್ ಹಂಝುಲ(ರ)ರನ್ನು ಕಳುಹಿಸಿದರು. ಅವರ ಮೇಲೂ ತಾಯಿಫ್‌ನ ಜನರು ಹಲ್ಲೆ ನಡೆಸಲು ಮುಂದಾದರು. ಆಗ ಹಝ್ರತ್ ಪೈಗಂಬರ್(ಸ) ಕೇಳಿದರು: 'ನಿಮ್ಮಲ್ಲಿ ಯಾರಿಗೆ ಹಂಝುಲರನ್ನು ರಕ್ಷಿಸಿ ಕರೆತರಲು ಸಾಧ್ಯವಿದೆ?' ಆಗ ಹಝ್ರತ್ ಅಬ್ಬಾಸ್(ರ) ಹೋಗಿ ಅವರನ್ನು ಹಲ್ಲೆಗಾರರಿಂದ ರಕ್ಷಿಸಿ ಕರೆತಂದರು.

ತಾಯಿಫ್‌ನ ನಿವಾಸಿಗಳು ಮತ್ತು ಖುರೈಶ್‌ರ ನಡುವೆ ಹಳೆಯ ಮತ್ತು ಉತ್ತಮ ಸಂಬಂಧಗಳಿದ್ದ ಕಾರಣದಿಂದ ಸಂಧಾನಕ್ಕಾಗಿ ಹಝ್ರತ್ ಅಬೂ ಸುಫ್‌ಯಾನ್ ಬಿನ್ ಹರಬ್(ರ) ಮತ್ತು ಹಝ್ರತ್ ಮುಗೀರ ಬಿನ್ ಶಅ್‌ಬ(ರ) ಕೋಟೆಯ ಒಳಗೆ ಹೋದರು. ಆದರೆ ಅವರಿಗೂ ಯಶಸ್ಸು ಲಭಿಸಲಿಲ್ಲ. ಆದಾಗ್ಯೂ, ಕೋಟೆಯೊಳಗಿನ ಜನರು ಹೀಗೊಂದು ವಿನಂತಿಯನ್ನು ಮಾಡಿದರು: 'ನಮ್ಮ ತೋಟಗಳಿಗೆ ಹಾನಿ ಮಾಡದಿರಲು ಮುಹಮ್ಮದ್(ಸ)ರಿಗೆ ಹೇಳಿರಿ. ಅಲ್ಲಾಹನ ಸಲುವಾಗಿ ಮತ್ತು ನಮ್ಮ ಸಂಬಂಧದ ಸಲುವಾಗಿ ಅವುಗಳನ್ನು ಹಾಗೆಯೇ ಬಿಡಲಿ.' ಅವರ ವಿನಂತಿಯ ಮೇರೆಗೆ ತೋಟಗಳನ್ನು ನಾಶಮಾಡುವ ಆದೇಶವನ್ನು ಹಝ್ರತ್ ಪೈಗಂಬರ್(ಸ) ಹಿಂದಕ್ಕೆ ಪಡೆದರು. ಇದು ಹಝ್ರತ್ ಪೈಗಂಬರ್(ಸ)ರ ಸ್ವಭಾವಗುಣದ ಒಂದು ಅದ್ಭುತ ಉದಾಹರಣೆಯಾಗಿದೆ. ಅಲ್ಲಾಹನನ್ನು ಮಧ್ಯಸ್ಥಿಕೆ ವಹಿಸಿದಾಗ, ಯುದ್ಧದ ಗತಿಯನ್ನೇ ಬದಲಾಯಿಸಬಹುದಾದ ಆದೇಶವನ್ನು ಕೂಡ ಅವರು ಹಿಂತೆಗೆದುಕೊಂಡರು.

ಈ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ಹೀಗೊಂದು ಘೋಷಣೆಯನ್ನು ಮಾಡಿಸಿದರು: 'ಕೋಟೆಯ ಗೋಡೆಗಳಿಂದ ಕೆಳಗಿಳಿದು ನಮ್ಮ ಬಳಿಗೆ ಬರುವ ಯಾವನೇ ಗುಲಾಮನನ್ನು ಸ್ವತಂತ್ರಗೊಳಿಸಲಾಗುವುದು.' ಈ ಘೋಷಣೆಯ ನಂತರ 23 ಗುಲಾಮರು ಗೋಡೆಗಳಿಂದ ಇಳಿದು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದರು. ಇದರಿಂದ ಕೋಟೆಯೊಳಗಿನ ಜನರು ಬಹಳ ದುಃಖಿತರಾದರು. ಹಝ್ರತ್ ಪೈಗಂಬರ್(ಸ) ಆ ಎಲ್ಲ ಗುಲಾಮರನ್ನು ಸ್ವತಂತ್ರಗೊಳಿಸಿ ಒಬ್ಬೊಬ್ಬ ಮುಸ್ಲಿಮನಿಗೆ ಒಪ್ಪಿಸಿದರು ಮತ್ತು ಆ ಗುಲಾಮನನ್ನು ಪೋಷಿಸುವ ಜವಾಬ್ದಾರಿಯನ್ನು ಆ ಮುಸ್ಲಿಮರಿಗೆ ವಹಿಸಿದರು. 'ಅವರಿಗೆ ಚೆನ್ನಾಗಿ ವಿದ್ಯೆ ಕಲಿಸಿ' ಎಂದು ಕೂಡ ಹಝ್ರತ್ ಪೈಗಂಬರ್(ಸ) ಆದೇಶಿಸಿದರು.

ಒಂದು ಸಂದರ್ಭದಲ್ಲಿ, ಉಯೈನ ಬಿನ್ ಹಿಸ್ನ್ ಫಝ್ಝಾರಿ ಎಂಬ ವ್ಯಕ್ತಿ ಕೋಟೆಯ ಒಳಗೆ ಹೋಗಿ ಬನೂ ಸಕೀಫ್‌ರನ್ನು ಇಸ್ಲಾಮ್ ಕಡೆಗೆ ಆಹ್ವಾನಿಸಲು ಹಝ್ರತ್ ಪೈಗಂಬರ್(ಸ)ರಿಂದ ಅನುಮತಿ ಕೇಳಿದರು. (ಮಕ್ಕಾ ವಿಜಯಕ್ಕಿಂತ ಮೊದಲು ಉಯೈನ ಇಸ್ಲಾಮ್ ಸ್ವೀಕರಿಸಿದ್ದರು. ಇವರನ್ನು ಹಝ್ರತ್ ಪೈಗಂಬರ್(ಸ) 'ಅಲ್‌ಅಹ್‌ಮಕ್ ಮುತಾಅ್' ಎಂದು ಕರೆದಿದ್ದರು. ಅಂದರೆ, ಮೂರ್ಖನಾದ ನಾಯಕ) ಅನುಮತಿ ಸಿಕ್ಕಿದ ನಂತರ ಉಯೈನ ಕೋಟೆಯ ಒಳಗೆ ಹೋಗಿ ಅವರನ್ನು ಇಸ್ಲಾಮ್‌ಗೆ ಆಹ್ವಾನಿಸುವ ಬದಲು ಬನೂ ಸಕೀಫ್‌ರನ್ನು ಇಸ್ಲಾಮ್ ವಿರುದ್ಧ ಮತ್ತಷ್ಟು ಪ್ರಚೋದಿಸಿದನು ಮತ್ತು ಹಿಂತಿರುಗಿ ಬಂದು ಸುಳ್ಳು ಹೇಳಿದನು. ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ದಿವ್ಯವಾಣಿಯ ಮೂಲಕ ಈ ವಿಷಯವನ್ನು ತಿಳಿಸಿದನು. ಹಝ್ರತ್ ಪೈಗಂಬರ್(ಸ) ಉಯೈನನ ಸುಳ್ಳನ್ನು ಬಯಲು ಮಾಡಲು, ಅವನು ಅಲ್ಲಿ ಹೇಳಿದ ಮಾತುಗಳನ್ನು ಪುನರಾವರ್ತಿಸಿದರು. ಇದನ್ನು ಕೇಳಿ ಉಯೈನ ಆಶ್ಚರ್ಯಚಕಿತಗೊಂಡನು.

ಕೋಟೆಗೆ ಮುತ್ತಿಗೆ ಹಾಕಿದ ಪರಿಸ್ಥಿತಿಯನ್ನು ಗಮನಿಸಿ, ಹಝ್ರತ್ ಪೈಗಂಬರ್(ಸ) ಹಝ್ರತ್ ನೌಫಲ್ ಬಿನ್ ಮುಆವಿಯ(ರ)ರೊಂದಿಗೆ ಸಮಾಲೋಚನೆ ನಡೆಸಿದರು. ಅವರು ಹೀಗೆ ಹೇಳಿದರು: 'ಇದು ನರಿ ತನ್ನ ಬಿಲದಲ್ಲಿ ಅಡಗಿಕೊಂಡಂತಾಗಿದೆ. ಅದರ ಬಳಿ ಸತತವಾಗಿ ನಿಂತರೆ ಅದನ್ನು ಹಿಡಿಯಬಹುದು, ಬಿಟ್ಟು ಹೋದರೂ ಅದಕ್ಕೆ ಹಾನಿ ಮಾಡುವ ಶಕ್ತಿ ಇರುವುದಿಲ್ಲ.' ಈ ಸಲಹೆಯ ಮೇರೆಗೆ ಹಝ್ರತ್ ಪೈಗಂಬರ್(ಸ) ಮುತ್ತಿಗೆಯನ್ನು ಕೊನೆಗೊಳಿಸಲು ನಿರ್ಧರಿಸಿದರು.

(ಹುಝೂರ್ ಹೇಳಿದರು:) ಕೇವಲ ಸಲಹೆಯ ಆಧಾರದ ಮೇಲೆ ಮಾತ್ರವಲ್ಲ, ಅಲ್ಲಾಹನ ಕಡೆಯಿಂದಲೂ ವಿಶೇಷ ಮಾರ್ಗದರ್ಶನ ಅಥವಾ ಸೂಚನೆ ಲಭಿಸಿರಬಹುದು ಎಂದು ತೋರುತ್ತದೆ. ಏಕೆಂದರೆ, ಹಝ್ರತ್ ಪೈಗಂಬರ್(ಸ)ರ ಸೇನಾ ಕಾರ್ಯಾಚರಣೆಗಳಲ್ಲಿ ಇಷ್ಟು ದೊಡ್ಡ ಕಾರ್ಯಾಚರಣೆಯನ್ನು ಮಧ್ಯದಲ್ಲೇ ಬಿಟ್ಟು ಹೋಗುವುದು ಇದೇ ಮೊದಲ ಬಾರಿಯಾಗಿತ್ತು. ಈ ಕುರಿತಾಗಿ, ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರಿಗೆ ಹೇಳಿದ ಒಂದು ಕನಸಿನ ಪ್ರಸ್ತಾಪವೂ ಇದೆ. ಹಝ್ರತ್ ಪೈಗಂಬರ್(ಸ) ಹೇಳಿದರು: 'ಒಂದು ಪಾತ್ರೆಯಲ್ಲಿ ಬೆಣ್ಣೆ ನನ್ನ ಬಳಿ ಬಂದಿದ್ದು, ಒಂದು ಕೋಳಿ ಕೊಕ್ಕಿನಿಂದ ಅದನ್ನು ಉರುಳಿಸಿಬಿಟ್ಟಿತು.' ಹಝ್ರತ್ ಅಬೂಬಕರ್(ರ) ಹೇಳಿದರು: 'ನನ್ನ ಅನಿಸಿಕೆಯ ಪ್ರಕಾರ, ಈ ಬಾರಿ ಸಕೀಫ್‌ನವರಿಂದ ನಿಮಗೆ ಬೇಕಾದುದನ್ನು ಪಡೆಯಲು ಸಾಧ್ಯವಾಗದು.' ಹಝ್ರತ್ ಪೈಗಂಬರ್(ಸ) ಕೂಡ ಈ ವ್ಯಾಖ್ಯಾನವನ್ನು ಒಪ್ಪಿಕೊಂಡರು.

ಮುತ್ತಿಗೆಯನ್ನು ಕೊನೆಗೊಳಿಸುವ ಘೋಷಣೆ ಮಾಡಿದಾಗ, ಕೆಲವು ಉತ್ಸಾಹಿ ಯುವಕರ ಪ್ರತಿಕ್ರಿಯೆ ಹೀಗಿತ್ತು: 'ನಾವು ಜಯ ಗಳಿಸದೇ ಏಕೆ ಹಿಂತಿರುಗುತ್ತಿದ್ದೇವೆ?' ಮೊದಲು ಅವರು ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ಬಳಿ ಹೋಗಿ, ವಿಜಯ ಸಾಧಿಸುವವರೆಗೂ ಮುತ್ತಿಗೆ ಮುಂದುವರೆಸುವಂತೆ ಹಝ್ರತ್ ಪೈಗಂಬರ್(ಸ)ರೊಡನೆ ವಿನಂತಿಸಲು ಹೇಳಿದರು. ಆದರೆ ಅವರಿಬ್ಬರೂ ನಿರಾಕರಿಸಿದಾಗ, ಆ ಯುವಕರು ನೇರವಾಗಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗಿ ಭಾವುಕರಾಗಿ ಹೀಗೆ ಹೇಳಿದರು: 'ಅಲ್ಲಾಹನ ಸಂದೇಶವಾಹಕರೇ, ನಾವು ಹೋರಾಡುತ್ತೇವೆ.' ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ಸರಿ, ನಾಳೆ ಬೆಳಿಗ್ಗೆ ಹೋರಾಡಿ' ಮರುದಿನ ಬೆಳಿಗ್ಗೆ, ಅವರಿಗೆ ಗಾಯಗಳ ಹೊರತು ಬೇರೇನೂ ಸಿಗಲಿಲ್ಲ. ಆಗ ಹಝ್ರತ್ ಪೈಗಂಬರ್(ಸ) 'ನಾಳೆ ಬೆಳಿಗ್ಗೆ ನಾವು ಹಿಂದಿರುಗುತ್ತೇವೆ' ಎಂದು ಹೇಳಿದಾಗ, ಈ ಯುವಕರು ಕೂಡ ಸಂತೋಷ ವ್ಯಕ್ತಪಡಿಸಿದರು. ಅವರ ಅಭಿಪ್ರಾಯದಲ್ಲಿನ ಬದಲಾವಣೆಯನ್ನು ನೋಡಿ ಹಝ್ರತ್ ಪೈಗಂಬರ್(ಸ) ಮುಗುಳ್ನಕ್ಕರು.

ಈ ಯುದ್ಧದಲ್ಲಿ ಸತ್ಯನಿಷೇಧಿಗಳ ಕಡೆಯಿಂದ ಮೂವರು ಮಾತ್ರ ಕೊಲ್ಲಲ್ಪಟ್ಟರು ಎಂದು ಕೆಲವು ವರದಿಗಳಿಂದ ತಿಳಿದುಬರುತ್ತದೆ. ಆದರೆ, ಗಾಯಗೊಂಡವರ ಮತ್ತು ಕೊಲ್ಲಲ್ಪಟ್ಟವರ ನಿಖರ ಸಂಖ್ಯೆ ತಿಳಿದಿಲ್ಲ, ಏಕೆಂದರೆ ಅವರು ಕೋಟೆಯ ಒಳಗೆ ಇದ್ದರು. ಹಾಗೆಯೇ, ಮುಸ್ಲಿಮರಲ್ಲಿ ಗಾಯಗೊಂಡವರ ನಿಖರ ಸಂಖ್ಯೆಯೂ ತಿಳಿದಿಲ್ಲ, ಆದರೆ ಹಝ್ರತ್ ಅಬೂ ಸುಫ್ಯಾನ್(ರ) ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಅಬೀ ಬಕರ್(ರ) ಗಾಯಗೊಂಡ ಬಗ್ಗೆ ಉಲ್ಲೇಖವಿದೆ. ಈ ಯುದ್ಧದಲ್ಲಿ ಹನ್ನೆರಡು ಸಹಾಬಿಯರು ಹುತಾತ್ಮರಾದರು ಎಂಬ ಉಲ್ಲೇಖವೂ ಇದೆ. ಅವರ ಹೆಸರುಗಳು ಹೀಗಿವೆ: ಹಝ್ರತ್ ಸಈದ್ ಬಿನ್ ಆಸ್(ರ), ಹಝ್ರತ್ ಇರ್ಫತ ಬಿನ್ ಜನಾಬ್(ರ), ಹಝ್ರತ್ ಅಬ್ದುಲ್ಲಾ ಬಿನ್ ಅಬೀ ಉಮಯ್ಯ(ರ), ಹಝ್ರತ್ ಅಬ್ದುಲ್ಲಾ ಬಿನ್ ಆಮಿರ್(ರ), ಹಝ್ರತ್ ಸಾಇಬ್ ಬಿನ್ ಹಾರಿಸ್(ರ) ಮತ್ತು ಅವರ ಸಹೋದರ ಅಬ್ದುಲ್ಲಾ ಬಿನ್ ಹಾರಿಸ್(ರ), ಹಝ್ರತ್ ಜುಲೈಹಾ ಬಿನ್ ಅಬ್ದುಲ್ಲಾ(ರ), ಹಝ್ರತ್ ಸಾಬಿತ್ ಬಿನ್ ಜಲಾ(ರ), ಹಝ್ರತ್ ಹಾರಿಸ್ ಬಿನ್ ಸಹ್ಲ್(ರ), ಹಝ್ರತ್ ಮುಂಧಿರ್ ಬಿನ್ ಅಬ್ದುಲ್ಲಾ(ರ), ಹಝ್ರತ್ ರಕೀಮ್ ಬಿನ್ ಸಾಬಿತ್(ರ) ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಅಬೂಬಕರ್(ರ), ಅವರು ಅನಂತರ ನಿಧನರಾದರು.

ಈ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಇಬ್ಬರು ಪತ್ನಿಯರಾದ ಹಝ್ರತ್ ಉಮ್ಮು ಸಲ್ಮಾ(ರ) ಮತ್ತು ಹಝ್ರತ್ ಝೈನಬ್(ರ) ಕೂಡ ಜೊತೆಯಲ್ಲಿದ್ದರು. ಅವರಿಗಾಗಿ ಎರಡು ಡೇರೆಗಳನ್ನು ಹಾಕಲಾಗಿತ್ತು. ಹಝ್ರತ್ ಪೈಗಂಬರ್(ಸ) ಆ ಎರಡೂ ಡೇರೆಗಳ ನಡುವೆ ನಮಾಝ್ ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಎಷ್ಟು ದಿನ ತಾಯಿಫ್‌ಗೆ ಮುತ್ತಿಗೆ ಹಾಕಿದರು ಎಂಬ ಬಗ್ಗೆ ವಿವಿಧ ವರದಿಗಳಿವೆ, ಹತ್ತರಿಂದ ನಲವತ್ತು ರಾತ್ರಿಗಳ ವರೆಗೆ ಎಂದು ಉಲ್ಲೇಖಿಸಲಾಗಿದೆ.

ಹಿಂತಿರುಗುವಾಗ ಹೀಗೆ ಹೇಳುತ್ತಾ ಹೋಗುವಂತೆ ಹಝ್ರತ್ ಪೈಗಂಬರ್(ಸ) ಆದೇಶಿಸಿದರು: 'ನಾವು ಹಿಂತಿರುಗುವವರಾಗಿದ್ದೇವೆ, ಪಶ್ಚಾತ್ತಾಪ ಪಡುವವರಾಗಿದ್ದೇವೆ, ಆರಾಧಿಸುವವರಾಗಿದ್ದೇವೆ ಮತ್ತು ನಮ್ಮ ಪ್ರಭುವನ್ನು ಸ್ತುತಿಸುವವರಾಗಿದ್ದೇವೆ'. ಬನೂ ಸಕೀಫ್ ವಿರುದ್ಧ ಶಾಪ ಪ್ರಾರ್ಥನೆ ಮಾಡಿರಿ ಎಂದು ಹಝ್ರತ್ ಪೈಗಂಬರ್(ಸ)ರೊಡನೆ ವಿನಂತಿಸಲಾಯಿತು. ಹಝ್ರತ್ ಪೈಗಂಬರ್(ಸ)ರ ಹೃದಯದ ವಿಶಾಲತೆ ಎಷ್ಟಿತ್ತೆಂದರೆ, ಶಪಿಸುವ ಬದಲು ಅವರು ಅವರಿಗಾಗಿ ಹೀಗೆ ಪ್ರಾರ್ಥಿಸಿದರು: 'ಹೇ ಅಲ್ಲಾಹ್, ಸಕೀಫ್‌ಗೆ ಮಾರ್ಗದರ್ಶನ ನೀಡು ಮತ್ತು ಅವರನ್ನು ಮುಸ್ಲಿಮರನ್ನಾಗಿ ಮಾಡು.'

ಅದರ ನಂತರ ಅವರು ಹೀಗೆ ದುಆ ಮಾಡಿದರು: 'ಹೇ ಅಲ್ಲಾಹ್, ಅವರಿಗೆ ಹಿದಾಯತ್ ನೀಡು ಮತ್ತು ಅವರ ಬಳಿಯಲ್ಲಿರುವ ಆಹಾರ ಸಾಮಗ್ರಿಗಳಿಗಿಂತ ಹೆಚ್ಚಾಗಿ ನೀನೇ ನಮಗೆ ಪರ್ಯಾಪ್ತನಾಗು.' ಹಝ್ರತ್ ಪೈಗಂಬರ್(ಸ)ರ ನಿಜವಾದ ಉದ್ದೇಶ ದಾರಿ ತಪ್ಪಿದ ಜನರೆಲ್ಲರೂ ಅಲ್ಲಾಹನ ಕಡೆಗೆ ಮರಳಬೇಕು ಎಂಬುದಾಗಿತ್ತು. ಅಲ್ಲಾಹನು ಈ ದುಆವನ್ನು ಸ್ವೀಕರಿಸಿದನು. ಒಂದು ವರ್ಷ ಕಳೆಯುವ ಮುನ್ನವೇ ತಾಯಿಫ್‌ನ ಜನರೆಲ್ಲರೂ ಹಿಜರಿ 9ರ ರಮಝಾನ್‌ನಲ್ಲಿ ಮುಸ್ಲಿಮರಾದರು.

ಹುನೈನಿನ ಯುದ್ಧಸಂಪತ್ತಿನ ವಿತರಣೆಯ ಬಗ್ಗೆಯೂ ಉಲ್ಲೇಖವಿದೆ. ಹಝ್ರತ್ ಪೈಗಂಬರ್(ಸ)ರ ಆದೇಶದ ಮೇರೆಗೆ, ಬಿಸಿಲು ಮತ್ತು ಚಳಿಯಿಂದ ರಕ್ಷಿಸಲಿಕ್ಕಾಗಿ ಆರು ಅಥವಾ ಎಂಟು ಸಾವಿರದಷ್ಟು ಸಂಖ್ಯೆಯ ಗುಲಾಮರ ವಾಸಕ್ಕೆ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡಲಾಯಿತು. ಯುದ್ಧಸಂಪತ್ತಾಗಿ ಇಪ್ಪತ್ತನಾಲ್ಕು ಸಾವಿರ ಒಂಟೆಗಳು, ನಲವತ್ತು ಸಾವಿರಕ್ಕೂ ಹೆಚ್ಚು ಕುರಿಗಳು, ಮತ್ತು ಸುಮಾರು 490 ಕಿಲೋಗ್ರಾಮಿನಷ್ಟು ಬೆಳ್ಳಿ ಲಭಿಸಿದವು. ಇದಕ್ಕಿಂತ ಮೊದಲು ಮುಸ್ಲಿಮರಿಗೆ ಇಷ್ಟು ದೊಡ್ಡ ಯುದ್ಧಸಂಪತ್ತು ಎಂದಿಗೂ ಸಿಕ್ಕಿರಲಿಲ್ಲ. ಇಂತಹ ಸಂದರ್ಭದಲ್ಲೂ, ಹಝ್ರತ್ ಪೈಗಂಬರ್(ಸ) ತಮ್ಮ ಸಹಾಬಿಯರ ತರಬೇತಿಯ ಬಗ್ಗೆ ತುಂಬಾ ಕಾಳಜಿ ವಹಿಸಿದರು. ಯುದ್ಧಸಂಪತ್ತಿನ ವಿತರಣೆಗೂ ಮುನ್ನ ಅವರು ಒಂದು ಘೋಷಣೆ ಮಾಡಿದರು: 'ಈ ಸಂಪತ್ತಿನಲ್ಲಿ ಐದನೇ ಒಂದು ಭಾಗವನ್ನು ಹೊರತುಪಡಿಸಿ ನನ್ನ ಹಕ್ಕು ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಇರುವಂತೆಯೇ ಆಗಿದೆ. ಆ ಐದನೇ ಒಂದು ಭಾಗವೂ ಕೊನೆಗೆ ನಿಮ್ಮ ಬಳಿಗೇ ಮರಳುವುದು.' ಅನಂತರ ಅವರು ಹೇಳಿದರು: 'ಯಾರಾದರೂ ಒಂದು ಸೂಜಿ, ಅದರ ದಾರ ಅಥವಾ ಅದಕ್ಕಿಂತ ಸಣ್ಣದಾದ ಏನನ್ನಾದರೂ ತೆಗೆದುಕೊಂಡಿದ್ದರೆ, ಅದನ್ನು ಹಿಂತಿರುಗಿಸಿರಿ. ಮೋಸ ಮಾಡುವುದರಿಂದ ದೂರವಿರಿ, ಏಕೆಂದರೆ ಮೋಸಗಾರಿಕೆಯು ಪುನರುತ್ಥಾನದ ದಿನ ಮೋಸಗಾರನ ಮೇಲೆ ಅವಮಾನ ಮತ್ತು ಕಳಂಕವಾಗಿ ಪರಿಣಮಿಸುವುದು. ಇದನ್ನು ಕೇಳಿ ಒಬ್ಬ ಸಹಾಬಿ ಒಂಟೆಯ ಕೂದಲಿನಿಂದ ಮಾಡಿದ ಒಂದು ದಾರವನ್ನು ಹಿಡಿದು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಹೇಳಿದರು: 'ನಾನು ಹರಿದ ಜೀನನ್ನು (ಸವಾರಿಮೃಗದ ಮೇಲೆ ಕುಳಿತುಕೊಳ್ಳಲು ಬಳಸುವ ಚರ್ಮದ ಆಸನ) ಹೊಲಿಯಲು ಈ ದಾರವನ್ನು ಯುದ್ಧಸಂಪತ್ತಿನಿಂದ ತೆಗೆದುಕೊಂಡಿದ್ದೆ'

ಅದೇ ರೀತಿ, ಇನ್ನೊಬ್ಬ ಸಹಾಬಿ ತಾನು ಯುದ್ಧಸಂಪತ್ತಿನಿಂದ ತೆಗೆದುಕೊಂಡಿದ್ದ ಒಂದು ಸೂಜಿಯನ್ನು ತನ್ನ ಹೆಂಡತಿಗೆ ನೀಡಿದ್ದರು. ಆ ಘೋಷಣೆಯನ್ನು ಕೇಳಿದ ತಕ್ಷಣ ಅವರು ತಮ್ಮ ಹೆಂಡತಿಯ ಬಳಿಗೆ ಹೋಗಿ ಸೂಜಿಯನ್ನು ಹಿಂತಿರುಗಿ ಪಡೆದು ಯುದ್ಧ ಸಂಪತ್ತಿನಲ್ಲಿ ಇಟ್ಟರು. ಹೃದಯಗಳನ್ನು ಗೆಲ್ಲುವುದು ಎಂಬ ತತ್ವವನ್ನು ಗಮನದಲ್ಲಿಟ್ಟುಕೊಂಡು, ಹಝ್ರತ್ ಪೈಗಂಬರ್(ಸ) ಯುದ್ಧ ಸಂಪತ್ತಿನ ವಿತರಣೆಯಲ್ಲಿ, ಮೊದಲು ಗೋತ್ರಗಳ ಮುಖ್ಯಸ್ಥರು ಮತ್ತು ನಾಯಕರಿಗೆ ಯುದ್ಧಸಂಪತ್ತನ್ನು ನೀಡಿದರು. ಈ ನಾಯಕರು ತಮ್ಮ ತಮ್ಮ ಗೋತ್ರಗಳಲ್ಲಿ ಗೌರವ ಮತ್ತು ಮಹತ್ವ ಹೊಂದಿದ್ದರು. ಅವರಿಗೆ ಹಝ್ರತ್ ಪೈಗಂಬರ್(ಸ) ನೂರು ನೂರು ಮತ್ತು ಐವತ್ತು ಐವತ್ತು ಒಂಟೆಗಳನ್ನು ನೀಡಿದರು.

ಅನಂತರ ಉಳಿದ ಜನರನ್ನು ಕರೆಯಲು ಹಝ್ರತ್ ಪೈಗಂಬರ್(ಸ) ಹಝ್ರತ್ ಝೈದ್ ಬಿನ್ ಸಾಬಿತ್(ರ)ರೊಡನೆ ಹೇಳಿದರು. ಹೀಗೆ ಅವರು ಎಲ್ಲ ಜನರಿಗೆ ಯುದ್ಧಸಂಪತ್ತನ್ನು ಹಂಚಿದರು. ಪ್ರತಿಯೊಬ್ಬರಿಗೂ ನಾಲ್ಕು ಒಂಟೆಗಳು ಅಥವಾ ನಲವತ್ತು ಕುರಿಗಳು ಸಿಕ್ಕಿದವು. ಖುರೈಶ್‌ರಿಗೆ ಯುದ್ಧ ಸಂಪತ್ತು ನೀಡಲು ಒಂದು ಕಾರಣವನ್ನು ವಿವರಿಸುತ್ತಾ ಹಝ್ರತ್ ಪೈಗಂಬರ್(ಸ) ಹೇಳಿದರು: 'ನಾನು ಖುರೈಶ್‌ರಿಗೆ ಯುದ್ಧಸಂಪತ್ತನ್ನು ನೀಡುವ ಮೂಲಕ ಅವರ ಹೃದಯಗಳನ್ನು ಗೆಲ್ಲಲು ಪ್ರಯತ್ನಿಸುತ್ತಿದ್ದೇನೆ, ಏಕೆಂದರೆ ಅವರು ಸತ್ಯನಿಷೇಧವನ್ನು ತೊರೆದಿದ್ದು ಇತ್ತೀಚೆಗೆ ಅಷ್ಟೇ.' ಈ ಸಂದರ್ಭದಲ್ಲಿ, ಕೆಲವು ಕಪಟವಿಶ್ವಾಸಿಗಳು ಯುದ್ಧಸಂಪತ್ತಿನ ವಿತರಣೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ಯುದ್ಧಸಂಪತ್ತಿನ ವಿತರಣೆಯ ವಿಷಯದಲ್ಲಿ ನ್ಯಾಯದಿಂದ ವರ್ತಿಸಿಲ್ಲ ಮತ್ತು ಅಲ್ಲಾಹನ ಸಂಪ್ರೀತಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿಲ್ಲ ಎಂದು ಅವರು ಆರೋಪಿಸಿದರು – ನಊಝುಬಿಲ್ಲಾಹ್. ಹಝ್ರತ್ ಪೈಗಂಬರ್(ಸ) ಇದನ್ನು ಆಲಿಸಿದಾಗ ಅವರ ಮುಖ ಕೆಂಪಾಯಿತು ಮತ್ತು ಹೀಗೆ ಹೇಳಿದರು: 'ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಕೂಡ ನ್ಯಾಯದಿಂದ ವರ್ತಿಸದಿದ್ದರೆ, ನ್ಯಾಯದಿಂದ ವರ್ತಿಸುವವರಾಗಿ ಮತ್ಯಾರು ಇದ್ದಾರೆ?' ಅನಂತರ ಹೀಗೆ ಹೇಳಿದರು: 'ಅಲ್ಲಾಹನು ನನ್ನ ಸಹೋದರ ಮೂಸಾರ ಮೇಲೆ ಕರುಣೆ ತೋರಲಿ, ಅವರಿಗೆ ಇದಕ್ಕಿಂತಲೂ ದೊಡ್ಡ ಕಷ್ಟಗಳನ್ನು ನೀಡಲಾಗಿತ್ತು, ಆದರೆ ಅವರು ತಾಳ್ಮೆಯಿಂದ ವರ್ತಿಸಿದರು.'

ಇದಾದ ನಂತರ ಮತ್ತೊಬ್ಬ ವ್ಯಕ್ತಿ ಎದ್ದು ನಿಂತು ವಿತರಣೆಯ ಮೇಲೆ ಆಕ್ಷೇಪ ವ್ಯಕ್ತಪಡಿಸಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ನಿನಗೆ ನಾಶವಾಗಲಿ, ನನ್ನ ಬಳಿ ನ್ಯಾಯ ಇಲ್ಲದಿದ್ದರೆ, ಇನ್ಯಾರ ಬಳಿ ನ್ಯಾಯ ಇರುವುದು?' ಹಝ್ರತ್ ಖಾಲಿದ್ ಬಿನ್ ವಲೀದ್(ರ) ಮತ್ತು ಹಝ್ರತ್ ಉಮರ್(ರ) ಎದ್ದು ನಿಂತು, 'ಅನುಮತಿ ನೀಡಿದರೆ, ನಾವು ಈಗಲೇ ಅವನ ತಲೆಯನ್ನು ಕಡಿದು ಹಾಕುತ್ತೇವೆ' ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಬೇಡ! ಆ

ವ್ಯಕ್ತಿ ನಮಾಝ್ ನಿರ್ವಹಿಸುವವನಾಗಿರಬಹುದು’ ಆಗ ಖಾಲಿದ್(ರ) ಕೇಳಿದರು: ‘ತನ್ನ ಹೃದಯದಲ್ಲಿ ಇರದ ಸಂಗತಿಯನ್ನು ನಮಾಝ್ ಮಾಡುವವನು ಹೇಳಲು ಸಾಧ್ಯವೇ?’ ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ‘ಖಾಲಿದ್, ಜನರ ಹೃದಯಗಳನ್ನು ಸೀಳಿ ನೋಡಲು ಅಥವಾ ಎದೆಗಳನ್ನು ತೆರೆದು ನೋಡಲು ನನಗೆ ಅನುಮತಿ ನೀಡಲಾಗಿಲ್ಲ.’

ಈ ವಿಷಯದ ಉಳಿದ ಭಾಗವನ್ನು ಮುಂದಿನ ಬಾರಿ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis****(atba)*

At, ***‘Masjid Mubarak’,*** *Islamabad, Tilford,* U.K. On 19-09-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha’at Team for Nazarath Nashr-O-Isha’ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon